# ಮಲೆಮಹದೇಶ್ವರ ಕಾವ್ಯದ ಮಹಿಳಾ ಪಾತ್ರಗಳ ವಿಶ್ಲೇಷಣೆ

**ಮುತ್ತುರಾಜು ಕೆ. ವಿ.[1] & ನಾಗಭೂಷಣ[2]**

[1]ಸಂಶೋಧನಾರ್ಥಿ, ಡಾ. ಡಿ.ವಿ ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

[2]ಸಹ ಪ್ರಾಧ್ಯಾಪಕರು, ವಿಶ್ವವಿದ್ಯಾನಿಲಯದ ವಿಜ್ಞಾನ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

DOI: https://doi.org/10.5281/zenodo.15123997

## ABSTRACT:

ಭಾರತ ಬಹು ಸಂಸ್ಕೃತಿಗಳಿಂದ ಕೂಡಿದೆ. ಭಾರತವನ್ನು ಸಂಸ್ಕೃತಿ ಮತ್ತು ಉಪಸಂಸ್ಕೃತಿಗಳ ನೆಲೆಗಟ್ಟಿನಲ್ಲಿ ಗ್ರಹಿಸುವುದಾದರೆ, ಜನಪದ ಕಥನಗಳು ಉಪಸಂಸ್ಕೃತಿಗಳ ಭಾಗಗಳಾಗಿವೆ. ಇದರ ಭಾಗವಾಗಿ ನಮಗೆ ಕನ್ನಡದಲ್ಲಿ ಮಲೆಮಹದೇಶ್ವರ, ಮಂಟೇಸ್ವಾಮಿ, ಜುಂಜಪ್ಪ, ಮೈಲಾರಲಿಂಗ ಇವರೆಲ್ಲರೂ ಕೂಡ ಮುಖ್ಯವಾಗಿ ಕಾಣುತ್ತಾರೆ. ಮಾತೃಮೂಲ ಸಂಸ್ಕೃತಿಯ ಅನೇಕ ಪಳೆಯುಳಿಕೆಗಳು ಈ ಕಾವ್ಯಗಳಲ್ಲಿ ದಟ್ಟವಾಗಿ ಕಂಡುಬರುತ್ತವೆ. ನನ್ನ ಅಧ್ಯಯನಕ್ಕೆ ಮಲೆಮಹದೇಶ್ವರ ಕಾವ್ಯವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಮಲೆಮಹದೇಶ್ವರ ಕಾವ್ಯದಲ್ಲಿ ಸಂಕಮ್ಮನ ಸಾಲು ಬಹಳ ವಿಶಿಷ್ಟವಾಗಿದೆ. ನನ್ನ ಅನುಪಸ್ಥಿತಿಯಲ್ಲಿ ಪರ ಪುರುಷರಿಗೆ ಒಲಿಯುವುದಿಲ್ಲ ಎಂದು ಬಲಗೈ ಭಾಷೆಯನ್ನು ನೀಡಬೇಕು ಎಂದು ನೀಲಯ್ಯ ಕೇಳಿದಾಗ, ಭಾಷೆ ನೀಡಲು ಒಪ್ಪದ ಸಂಕಮ್ಮ 'ಕೊಟ್ಟಿದ ತೆರವನ್ನು ಹಿಂತೆಗೆದುಕೊಂಡು ನನ್ನನ್ನುಬಿಟ್ಟು ಬಿಡು' ಎಂದು ವಿರೋಧಿಸುತ್ತಾಳೆ. ಅವಳಿಗೆ ಘೋರತರವಾದ ಹಿಂಸೆಯನ್ನು ನೀಡಿ, ಹೆಜ್ಜೇನು ಮಲೆ ಭೇಟೆಗೆ ಹೊರಡುತ್ತಾರೆ. ಅವನು ಹೊರಟ ಮೇಲು ಅವನು ನೀಡಿದ ಹಿಂಸೆಯ ಪರಿಣಾಮವನ್ನು ಅನುಭವಿಸುತ್ತಿರುತ್ತಾಳೆ. ಹಿಂಸೆಯನ್ನು ತಾಳಲಾರದೆ, ಅದರಿಂದ ಪಾರು ಮಾಡುವಂತೆ ಮಹದೇಶ್ವರನಲ್ಲಿ ಮೊರೆ ಹಿಡುತ್ತಾಳೆ. ಮಹದೇಶ್ವರ ಸಂಕಮ್ಮನನ್ನು ಕಷ್ಟದಿಂದ ಪಾರು ಮಾಡಿ, ಅವಳಿಗೆ ಮಕ್ಕಳ ಫಲವನ್ನು ನೀಡುತ್ತಾರೆ. ಹೆಣ್ಣಾದವಳು ಮಕ್ಕಳನ್ನು ಪಡೆಯಲೇಬೇಕೆಂಬ ಒತ್ತಡದ ಪರಿಣಾಮವಾಗಿ ಸಂಕಮ್ಮನು ಮಹದೇಶ್ವರ ವರಪ್ರಸಾದದಿಂದ ಕಾರಯ್ಯ ಮತ್ತು ಬಿಲ್ಲಯ್ಯ ಎಂಬ ಇಬ್ಬರು ಮಕ್ಕಳಿಗೆ ಜನ್ಮ ನೀಡುತ್ತಾಳೆ. ಆ ಇಬ್ಬರು ಮಕ್ಕಳನ್ನು ಮಹದೇಶ್ವರ ಶಿಶುಮಕ್ಕಳಾಗಿ ಸ್ವೀಕರಿಸಿ, ತನ್ನೊಡನೆ ಕರೆದುಕೊಂಡು ಹೋಗುವುದು ಪುರುಷ ಪ್ರಧಾನ ವ್ಯವಸ್ಥೆಯ ಕೈವಾಡವೆಂದು ಹೇಳಬಹುದು. ಏಕೆಂದರೆ ತಾಯಿ ಮತ್ತು ಮಕ್ಕಳ ನಡುವೆ ಇರಬೇಕಾದ ಕರುಳ ಬಳ್ಳಿಯ ಸಂಬಂಧವನ್ನು ಕತ್ತರಿಸಿ, ತನ್ನ ಕಾರ್ಯಸಾಧನೆ ಮಾಡಿಕೊಳ್ಳುವುದನ್ನು ಕಾಣಬಹುದು. ಮಲೆ ಮಹದೇಶ್ವರ ಕಾವ್ಯದ ಮತ್ತೊಂದು ಮಹಿಳಾ ಪಾತ್ರವಾದ ಬೇವಿನಹಟ್ಟಿ ಕಾಳಮ್ಮಳನ್ನು ಏನಾದರೂ ಮಾಡಿ ತನ್ನ ಒಕ್ಕಲಾಗಿಸಿಕೊಳ್ಳಬೇಕು, ಅವಳನ್ನು ಮಣಿಸಬೇಕು ಎಂಬ ಹಠ ಮಹದೇಶ್ವರನಲ್ಲಿದೆ. ನಾಸ್ತಿಕವಾದಿಯಾಗಿ ಕಾಳವ್ವೆ ರೂಪುಗೊಳ್ಳುತ್ತಿರಬೇಕಾದರೆ ಅವಳನ್ನು ಆಸ್ತಿಕರಾಗಿ ಇರಿಸುವ ಪ್ರಯತ್ನ ಮಹದೇಶ್ವರನಲ್ಲಿದೆ. ಬೇವಿನಹಟ್ಟಿ ಕಾಳಮ್ಮನನ್ನು ತನ್ನ ಪಂಥದ ಅನುಯಾಯಿಯಾಗಿ ಮಾಡಿಕೊಳ್ಳುವ ವ್ಯವಸ್ಥೆಯನ್ನು ಮಹದೇಶ್ವರ ಸೃಷ್ಟಿಸಿದ್ದಾನೆ.

ಇಲ್ಲಿ ಮಾತೃಮೂಲ ಸಂಸ್ಕೃತಿ ದಮನ, ಪಿತೃಮೂಲ ಸಂಸ್ಕೃತಿಯ ಸ್ಥಾಪನೆಯನ್ನು ಕಾಣಬಹುದು. ಮೂಗಯ್ಯ-ರಾಮವ್ವೆ ದಂಪತಿಗಳನ್ನು ಮಹದೇಶ್ವರ ತನ್ನ ಒಕ್ಕಲಾಗಿಸಿಕೊಳ್ಳಲು ಪ್ರಯತ್ನಿಸಿದಾಗ ರಾಮವ್ವೆ ವಿರೋಧಿಸುತ್ತಾಳೆ. ಆದಿಶಕ್ತಿ ತನಗೆ ಸುಖಭೋಗವನ್ನು, ಯವ್ವನವನ್ನು ತೀರಿಸುವುದಕ್ಕೆ ಇಬ್ಬರು ಮಕ್ಕಳನ್ನು ಪಡೆದು, ನನಗೆ ನೀವು ಗಂಡನಾಗಬೇಕು ಎಂದಾಗ ಅವರು ಒಪ್ಪುವುದಿಲ್ಲ. ಮೂರನೇ ಮಗನಾಗಿ ಮಹದೇಶ್ವರನ್ನು ಪಡೆದು ನನಗೆ ಪತಿಯಾಗು ಎಂದಾಗ ಮಹದೇಶ್ವರ ಅದಕ್ಕೆ ಒಪ್ಪಿಕೊಂಡು, ಆದಿಶಕ್ತಿಯಲ್ಲಿ ವಿಶೇಷವಾದ ವಿದ್ಯೆಗಳನ್ನೆಲ್ಲ ಅವಳಿಂದಲೇ ವಶ ಮಾಡಿಕೊಳ್ಳುತ್ತಾನೆ. ಕೊನೆಗೆ ಅವಳನ್ನು ಸುಟ್ಟು ಭಸ್ಮ ಮಾಡುತ್ತಾನೆ. ಮಾತೃಪ್ರಧಾನ ನೆಲೆಯೊಂದನ್ನು ಪಿತೃಪ್ರಧಾನ ನೆಲೆಯನ್ನಾಗಿ ಪರಿವರ್ತಿಸಿದ ಕಾಲಘಟ್ಟದ ರೂಪಕವಾಗಿ ಮಲೆಮಹದೇಶ್ವರ ಕಾವ್ಯದ ಆದಿಶಕ್ತಿ ಪ್ರಸಂಗವನ್ನು ಗ್ರಹಿಸಬಹುದು. ಮೈಸೂರಿನಲ್ಲಿ ಮಹಿಷಾಸುರ, ಐಹಿಷಾಸುರ ಈ ಇಬ್ಬರೂ ರಾಕ್ಷಸರ ಹಾವಳಿ ಹೆಚ್ಚಿದಾಗ, ಪಾರ್ವತಿ ಶಿವನಿಗೆ ಈ ಇಬ್ಬರನ್ನು ಕೊಲ್ಲಲು ತಿಳಿಸಿದಾಗ, ಶಿವನು ಅದಕ್ಕೆ ಒಪ್ಪುವುದಿಲ್ಲ. ಶಿವನಿಂದ ವರವನ್ನು ಪಡೆದ,ಪಾರ್ವತಿ ರಾಕ್ಷಸ ರೂಪವನ್ನು ತಾಳಿ, ಆ ರಾಕ್ಷಸರನ್ನು ಸಂಹಾರ ಮಾಡುತ್ತಾಳೆ. ಹಿಡಿಂಬೆ ತನಗೆ ಸಂತಾನ ಭಾಗ್ಯ ಬೇಕೆಂದು ಶಿವನನ್ನು ಕುರಿತು ತಪಸ್ಸು ಮಾಡಿದಾಗ, ಮಹದೇಶ್ವರ ವಿಕಾರವಾದ ಮಗುವಾಗಿ ಹಿಡಿಂಬೆ ಹೊಟ್ಟೆಯಲ್ಲಿ ಜನಿಸಿದಾಗ, ವಿಕಾರವಾದ ಮಗುವನ್ನು ಹಿಡಿಂಬೆ ಒಪ್ಪದೆ, ಅದನ್ನು ಮೆಳೆಯಲ್ಲಿ ಬಿಸಾಡುತ್ತಾಳೆ. ಮಲೆ ಮಹದೇಶ್ವರ ಕಾವ್ಯದ ಈ ಎಲ್ಲಾ ಪಾತ್ರಗಳನ್ನು ಹೆಣ್ಣಿನ ಅಸ್ಮಿತೆಯ ಭಾಗವಾಗಿ ನೋಡಬಹುದು.

## KEYWORDS:

ಪಿತೃ ಮೂಲ ಸಂಸ್ಕೃತಿ, ಮಾತೃಮೂಲ ಸಂಸ್ಕೃತಿ, ಒಕ್ಕಲು, ಹೆಣ್ಣಿನ ಅಸ್ಮಿತೆ, ಮೊರೆ.

ಭಾರತ ಬಹು ಸಂಸ್ಕೃತಿಗಳಿಂದ ಕೂಡಿದೆ. ಭಾರತವನ್ನು ಸಂಸ್ಕೃತಿ ಮತ್ತು ಉಪಸಂಸ್ಕೃತಿಗಳ ನೆಲೆಗಟ್ಟಿನಲ್ಲಿ ಗ್ರಹಿಸುವುದಾದರೆ, ಜನಪದ ಕಥನಗಳು ಉಪಸಂಸ್ಕೃತಿಯ ಭಾಗಗಳಿವೆ. ವೈದಿಕ ಪರಂಪರೆಯನ್ನೇ ಭಾರತದಲ್ಲಿ ಪ್ರಧಾನ ಸಂಸ್ಕೃತಿಯನ್ನಾಗಿ ಪ್ರತಿಬಿಂಬಿಸಿದ ಹೊತ್ತಲ್ಲಿ, ಜನಪದರು ಅದಕ್ಕೆ ಪ್ರತಿರೋಧವೆಂಬಂತೆ ಜನಪದ ನಾಯಕನನ್ನು ಸೃಷ್ಟಿಸಿಕೊಂಡರು. ಇದರ ಭಾಗವಾಗಿ ನಮಗೆ ಕನ್ನಡದಲ್ಲಿ ಮಲೆಮಹದೇಶ್ವರ, ಮಂಟೇಸ್ವಾಮಿ, ಜುಂಜಪ್ಪ, ಮೈಲಾರಲಿಂಗ ಇವರೆಲ್ಲರೂ ಕೂಡ ಮುಖ್ಯವಾಗಿ ಕಾಣುತ್ತಾರೆ. ಈ ಕಥನದೊಳಗಡೆ ವೈದಿಕ ಪರಂಪರೆ ಹೆಣ್ಣನ್ನು ಯಾವ ಮಾದರಿಯಲ್ಲಿ ಕಾಣಲಾಗಿದೆಯೋ, ಅದಕ್ಕೆ ಪರ್ಯಾಯವಾಗಿ ಹೆಣ್ಣಿನ ಭಿನ್ನ ಚಿತ್ರಣವನ್ನು ಇಲ್ಲಿ ಗಮನಿಸಬಹುದು. ಭಾರತೀಯ ಮಾತೃಮೂಲ ಸಂಸ್ಕೃತಿಯ ಅನೇಕ ಪಳೆಯುಳಿಕೆಗಳು ಈ ಕಾವ್ಯಗಳಲ್ಲಿ ದಟ್ಟವಾಗಿ ಕಂಡು ಬರುತ್ತವೆ. ನನ್ನ ಅಧ್ಯಯನಕ್ಕೆ ಮಲೆಮಹದೇಶ್ವರ ಕಾವ್ಯವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಮಲೆಮಹದೇಶ್ವರ ಕಾವ್ಯವು ಮಾದಪ್ಪ ಹುಟ್ಟಿ ಬೆಳೆದ ಸಾಲು, ಜುಂಜೇಗೌಡನ ಸಾಲು, ಶ್ರವಣ ದೊರೆ ಸಾಲು, ಸಂಕಮ್ಮನ ಸಾಲು, ಬೇವಿನ ಹಟ್ಟಿ ಕಾಳಮ್ಮನ ಸಾಲು, ಸರಗೂರಯ್ಯನ ಸಾಲು ಎಂಬ ಏಳು ಸಾಲುಗಳನ್ನು ಹೊಂದಿದೆ. ಉತ್ರಾಜಮ್ಮ ಮತ್ತು ಶಿವದಾಸ ದಂಪತಿಗಳ ಮಗನಾಗಿ ಜನಿಸಿದ ಮಾದೇಶ್ವರನಿಗೆ ವ್ಯಾಘ್ರಾನಂದ ಮುನಿಗಳು ಮರಿದೇವರು ಎಂದು ನಾಮಕರಣ ಮಾಡುತ್ತಾರೆ. ತಂದೆ–ತಾಯಿಗಳಿಂದ ಮಗನನ್ನು ಕಾಣಿಕೆಯಾಗಿ ಪಡೆದುಕೊಂಡು ಶ್ರೀ ಶೈಲಕ್ಕೆ ಹೋಗಿ, ಅಲ್ಲಿ ವಿದ್ಯೆ–ಬುದ್ಧಿಯನ್ನು ಕಲಿಸುತ್ತಾರೆ. ನಂತರದಲ್ಲಿ ವ್ಯಾಘ್ರಾನಂದ ಮುನಿಗಳು 'ನನ್ನ ಗುರು ಮಠವನ್ನು ಬಿಟ್ಟು ಲೋಕ ಕಲ್ಯಾಣಕ್ಕೆ ಹೋಗು' ಎಂದು ಕಳುಹಿಸಿ ಕೊಡುತ್ತಾರೆ. ಆಗ ಮಾದೇಶ್ವರರು ಸುತ್ತೂರು ಮಠವನ್ನು ಪ್ರವೇಶಿಸುತ್ತಾರೆ. ಅದು ಸುತ್ತೂರು ಮಠದಲ್ಲಿ ಆಗ ಜಾತ್ರೆ ನಡೆಯುತ್ತಿತ್ತು. ಜಾತ್ರೆಯ ಸಂಭ್ರಮದಲ್ಲಿ ಮುಳುಗಿದ್ದ ಜನರ ಗುಂಪಿನಲ್ಲಿ ಒಬ್ಬನಿಗೆ ಹಾವು ಕಡಿದು ಸಾಯುತ್ತಾನೆ. ಮಾದೇಶ್ವರ ಬೇಲಿಯೊಳಗಿನ ಸೊಪ್ಪನ್ನು ತಂದು, ಅವನ ಬಾಯಿಗೆ ಸೊಪ್ಪಿನ ರಸವನ್ನು ಹಾಕಿ, ಅವನನ್ನು ಬದುಕಿಸುತ್ತಾರೆ. ಈ ಪವಾಡವನ್ನು ಕಂಡ ಸುತ್ತೂರು ಮಠದ ಸಿದ್ಧಾನಂದ ದೇಶಿಕ ಸ್ವಾಮಿಗಳು ಮಾದೇಶ್ವರರನ್ನು ಸುತ್ತೂರು ಮಠದಲ್ಲಿ ರಾಗಿ ಬೀಸುವ ಕಾಯಕವನ್ನು ಕೊಟ್ಟು ಉಳಿಸಿಕೊಳ್ಳುತ್ತಾರೆ. ಅಲ್ಲಿ ಕೆಲವು ದಿನ ರಾಗಿ ಬೀಸುವ ಕಾಯಕವನ್ನು ಮಾಡಿ "ಸುತ್ತೂರು ಮಠದಲ್ಲಿ ಸುಖ ಅಂತ ಬಂದೆ, ಕುಕ್ಕೇಲಿ ರಾಗಿ ತುಂಬಿ ಮಡಗಿದ್ದೀರಿ" ಎಂದು ಹಂಗಿಸಿ ಶಾಪ ಕೊಟ್ಟು ಹೊರಡುತ್ತಾರೆ. ಅಲ್ಲಿಂದ ಮಾದೇಶ್ವರರು ಬದನಾಳು ಮಠಕ್ಕೆ ಬರುತ್ತಾರೆ. ಬದನಾಳು ಮಠದ ಸ್ವಾಮಿಗಳು ಇಲ್ಲಿ ವಿದ್ಯೆ ಕಲಿಯಬೇಕಾದರೆ ಬದನೆ ಗಿಡಗಳಿಗೆ ನೀರನ್ನು ಹಾಕುವ ಕೆಲಸವನ್ನು ಮಾಡಬೇಕು ಎಂದು ಹೇಳುತ್ತಾರೆ. ಅದಕ್ಕೆ ಒಪ್ಪಿದ ಮಾದೇಶ್ವರರು ಗಂಗಾದೇವಿಯನ್ನು ಕರೆಯುತ್ತಾರೆ. ಆಗ ತೋಟವೆಲ್ಲಾ ನೀರಿನಿಂದ ತುಂಬಿ ಹೋಗುತ್ತದೆ. "ಬದನಾಳು ಮಠದಲ್ಲಿ ಹಾಕಿದ ಬದನೆ ಗೊಡ್ಡಾಗಲಿ, ಈ ಮಠವೂ ನನಗೆ ತರವಲ್ಲ" ಎಂದು ಹೇಳಿ ಹೊರಟರು. ಆ ನಂತರ ಮಾದೇಶ್ವರರು ವಾಟಾಳು ಮಠಕ್ಕೆ ಬರುತ್ತಾರೆ. ಹೊಟ್ಟೆ ಹಸಿವು ಎಂದು ಗುರುಗಳಲ್ಲಿ ಹೇಳಿಕೊಳ್ಳುತ್ತಾರೆ. ಅವರು ಅಡುಗೆ ಬಂಡಾರಿಯನ್ನು ಕರೆದು ಹೊಟ್ಟೆ ತುಂಬಾ ಅಂಬಲಿಯನ್ನು, ತಿನ್ನುವಷ್ಟು ತುಂಬೆಸೊಪ್ಪನ್ನು ಕೊಡಿಸುತ್ತಾರೆ. ಸಂತೋಷದಿಂದ ಅಂಬಲಿಯನ್ನು ಕುಡಿದ ಮಾದೇಶ್ವರರು ' ಈ ಮಠದಲ್ಲಿ ಅಂಬಲಿ, ತುಂಬೇಸೊಪ್ಪು ಇನ್ನು ಮುಂದೆ ತುಪ್ಪ, ಅನ್ನವಾಗಲಿ' ಎಂದು ವರಕೊಟ್ಟು ಕುಂತೂರು ಮಠಕ್ಕೆ ಬರುತ್ತಾರೆ. ಕುಂತೂರು ಮಠದ ಪ್ರಭುಲಿಂಗಸ್ವಾಮಿಗಳು ಮಹದೇಶ್ವರರಿಗೆ ಮಠದಲ್ಲಿ ಲಿಂಗ ಪೂಜೆಗೆ ಹೂವನ್ನು ತರುವ ಕೆಲಸವನ್ನು ವಹಿಸಲಾಗುತ್ತದೆ. ಅಲ್ಲಿದ್ದ ಗೊದ್ದ, ಗೋಸುಂಬೆ, ಹಾವು, ಚೇಳುಗಳನ್ನು ಅಲ್ಲಿನ ಕೊಳದ ನೀರಿಗೆ ಅದ್ದಿ ಪುಷ್ಪಗಳಾಗಿ ಪರಿವರ್ತಿಸುತ್ತಾರೆ. ಇದನ್ನು ಕಂಡ ಮಠದವರು ಮಹದೇಶ್ವರನನ್ನು ಅಲ್ಲಿಂದ ಸಾಗಹಾಕುತ್ತಾರೆ. ಅಲ್ಲಿಂದ ಆರ್ದ್ನಳ್ಳಿ ಮಠಕ್ಕೆ ಬಂದ ಮಹದೇಶ್ವರರು ನೂರಾರು ಹಳ್ಳಿಗಳನ್ನು ಸಂಚರಿಸಿ ಕೊನೆಗೆ

ಎಪ್ಪತ್ತೇಳು ಮಲೆಯ ನಡುವೆ ಸೀಗೆ, ಸಿರುಗಂಧ, ಕೆಮ್ಮತ್ತಿ ಬೆಳೆಯುವ ದಟ್ಟವಾದ ಅರಣ್ಯಕ್ಕೆ ಬಂದು ನೆಲೆಸುತ್ತಾರೆ. ಮಾದೇಶ್ವರರು ಆಲಂಬಾಡಿ ಜುಂಜೇಗೌಡ, ಸರಗೂರ ಮೂಗಯ್ಯ, ಭೀಮನಕೊಲ್ಲಿಯ ಹಲಗೇಗೌಡ–ಮಾದಮ್ಮ ದಂಪತಿಗಳನ್ನು ಒಕ್ಕಲನ್ನಾಗಿ ಮಾಡಿಕೊಳ್ಳುತ್ತಾರೆ.

ಮಹದೇಶ್ವರ ಕಾವ್ಯದಲ್ಲಿ ಸಂಕಮ್ಮನ ಸಾಲು ಬಹಳ ವಿಶಿಷ್ಟವಾದ ಭಾಗವಾಗಿದೆ. ತಂದೆ –ತಾಯಿ ನೋಡಿದ ಹೆಣ್ಣುಗಳನ್ನು ಒಪ್ಪದ ನೀಲೇಗೌಡ, ತಾನು ಒಪ್ಪಿದ ಹೆಣ್ಣನ್ನೇ ಮದುವೆ ಮಾಡಿಕೊಳ್ಳುತ್ತಾನೆ. ತನ್ನ ಕುಟುಂಬದವರು ತನ್ನ ಹೆಂಡತಿಯನ್ನು ಬಂಜೆ ಎಂದು ಅಪಮಾನಿಸಿದಾಗ, ದಟ್ಟ ಅರಣ್ಯದ ನಡುವೆ ಒಂಟಿ ಮನೆ ಮಾಡಿಕೊಂಡು ಹೆಂಡತಿಯೊಡನೆ ಆತ ಜೀವನ ನಡೆಸುತ್ತಾನೆ. ನನ್ನ ಅನುಪಸ್ಥಿತಿಯಲ್ಲಿ ಪರ ಪುರುಷರಿಗೆ ಒಲಿಯುವುದಿಲ್ಲವೆಂದು ಸಂಕಮ್ಮನಲ್ಲಿ ಬಲಗೈ ಭಾಷೆಯನ್ನು ಕೇಳುತ್ತಾನೆ.

ಆಗ ಬಂಜೆ ಕೈಲಿನ ಭಾಷೆ ನಿನಗೆ ಒಳಿತನ್ನು ಉಂಟುಮಾಡುವುದಿಲ್ಲ ಬಲಗೈ ಭಾಷೆಯನ್ನು ಕೊಡಲು ನಾನು ಮಾಡಿರುವ ತಪ್ಪುಗಳೇನು? ಎಂದು ಪ್ರಶ್ನಿಸುತ್ತಾಳೆ. ನೀಲಯ್ಯ ಅನುಮಾನಕ್ಕೆ ಬೇಸತ್ತ ಸಂಕಮ್ಮ ನೀನು ಕೊಟ್ಟಿರುವ ತೆರವನ್ನು ಹಿಂತೆಗೆದುಕೊಂಡು ನನ್ನನ್ನು ಬಿಟ್ಟುಬಿಡು ಎಂದು ಬಲಗೈ ಭಾಷೆ ಕೊಡುವುದನ್ನು ತೀವ್ರತರವಾಗಿ ವಿರೋಧಿಸುತ್ತಾಳೆ. ಪತಿವ್ರತಾ ಧರ್ಮವನ್ನು ಚಾಚು ತಪ್ಪದೇ ಪಾಲಿಸುತ್ತಿರುತ್ತಾಳೆ. ಬಂಜೆಯಾದ ನಾನು ಕೊಡುವ ಭಾಷೆಯು ನನ್ನ ಗಂಡನಿಗೆ ಶ್ರೇಯಸ್ಸನ್ನು ಉಂಟುಮಾಡುವುದಿಲ್ಲ ಎಂದು ಸಂಕಮ್ಮನು ಬಲವಾಗಿ ನಂಬಿರುತ್ತಾಳೆ.

ಬಲಗೈ ಭಾಷೆ ನೀಡಲು ಒಪ್ಪದ ಸಂಕಮ್ಮನಿಗೆ ಘೋರತರವಾದ ಹಿಂಸೆಯನ್ನು ನೀಡಿ ಹೆಜ್ಜೇನು ಮಲೆ ಬೇಟೆಗೆಹೊರಡುತ್ತಾನೆ. ಅವನು ಹೊರಟ ಮೇಲು ಅವನು ನೀಡಿದ ಹಿಂಸೆಯ ಪರಿಣಾಮವನ್ನು ಅನುಭವಿಸುತ್ತಿರುತ್ತಾಳೆ. ಹಿಂಸೆಯನ್ನು ತಾಳಲಾರದೆ ಅದರಿಂದ ಪಾರು ಮಾಡುವಂತೆ ಮಾದೇಶ್ವರನಲ್ಲಿ ಮೊರೆಹಿಡುತ್ತಾಳೆ.

ಮಾದೇಶ್ವರ ಸಂಕಮ್ಮನನ್ನು ಕಷ್ಟದಿಂದ ಪಾರು ಮಾಡಿ ಅವಳಿಗೆ ಮಕ್ಕಳ ಫಲವನ್ನು ನೀಡುತ್ತಾರೆ. ಸಂಕಮ್ಮನು ಮಹದೇಶ್ವರನ ವರಪ್ರಸಾದದಿಂದ ಮಕ್ಕಳನ್ನು ಪಡೆಯುತ್ತಾಳೆ. ಹೆಣ್ಣಾದವಳು ಮಕ್ಕಳನ್ನು ಪಡೆಯಲೆಬೇಕೆಂಬ ಕುಟುಂಬದ ಒತ್ತಡದ ಪರಿಣಾಮವಾಗಿ ಸಂಕಮ್ಮನು ಮಹದೇಶ್ವರನ ವರಪ್ರಸಾದದಿಂದ ಮಕ್ಕಳನ್ನು ಪಡೆಯುತ್ತಾಳೆ. ಮಹದೇಶ್ವರನ ವರ ಪ್ರಸಾದದಿಂದ ಜನಿಸಿದ ಮಕ್ಕಳಾದ ಕಾರಯ್ಯ ಮತ್ತು ಬಿಲ್ಲಯ್ಯರನ್ನು ತನ್ನ ಶಿಶುಮಕ್ಕಳನ್ನಾಗಿ ಸ್ವೀಕರಿಸಿ, ಅವರನ್ನು ತನ್ನೊಡನೆ ಕರೆದುಕೊಂಡು ಹೋಗುವುದು ಪುರುಷ ಪ್ರಧಾನ ವ್ಯವಸ್ಥೆಯ ಕೈವಾಡವೆಂದು ಹೇಳಬಹುದು. ಏಕೆಂದರೆ ತಾಯಿ ಮತ್ತು ಮಕ್ಕಳ ನಡುವೆ ಇರಬೇಕಾದ ಕರಳುಬಳ್ಳಿಯ ಸಂಬಂಧವನ್ನು ಕತ್ತರಿಸಿ, ತನ್ನ ಕಾರ್ಯಸಾಧನೆ ಮಾಡಿಕೊಳ್ಳುವುದನ್ನು ಕಾಣಬಹುದು.

ಬೇವಿನಹಟ್ಟಿ ಕಾಳಮ್ಮನು ನನಗೆ ಮತ್ತು ನನ್ನ ಕುಟುಂಬಕ್ಕೆ ಯಾವುದೇ ತೊಂದರೆ ಉಂಟಾದರೂ ಎಳ್ಳನ್ನು ಮಾತ್ರ ಕೊಡಲಾಗುವುದಿಲ್ಲ ಎನ್ನುತ್ತಾಳೆ. ಕಾಳಮ್ಮನ ನಿಲುವು ಪುರುಷ ಪ್ರಧಾನ ಸಮಾಜ ಹಾಗೂ ಮಹಿಳಾ ಸಬಲೀಕರಣಕ್ಕೆ ತಡೆಗೋಡೆಯಂತಿದ್ದ ಅದರ ಮೌಲ್ಯಗಳನ್ನು ಪ್ರತಿರೋಧಿಸುವುದಾಗಿದೆ. ಇಲ್ಲಿ ಗಂಡಿನ ಪ್ರಾಮುಖ್ಯತೆ ಇಲ್ಲದಿರುವುದನ್ನು ಈ ಕಾವ್ಯ ಭಾಗದ ಗಂಡಿನ ಪಾತ್ರಗಳು, ಅವರಿಗೆ ನೀಡಲಾದ ಸ್ಥಾನಮಾನಗಳ ಮೂಲಕ ಅರ್ಥೈಸಿಕೊಳ್ಳಬಹುದು ಹಾಗೂ ಮಾತೃಮೂಲೀಯ ಕುಟುಂಬದ ಲಕ್ಷಣಗಳನ್ನು ಗುರುತಿಸಬಹುದು. ಗಂಡ-ಮಕ್ಕಳು ಸತ್ತರು, ನನ್ನ ಆಸ್ತಿ- ಪಾಸ್ತಿಗೆ ಯಾವುದೇ ನಷ್ಟ ಉಂಟಾದರೂ ಎಳ್ಳನ್ನು ಮಾತ್ರ ಕೊಡುವುದಿಲ್ಲ ಎಂದು ಕಾಳಮ್ಮ ಹೇಳುತ್ತಾಳೆ.

ಕಾಳಮ್ಮನು ತನ್ನ ಸೊಸೆಯಂದಿರು ಮನೆಯಲ್ಲಿ ಅಡುಗೆ ಮಾಡುವುದಕ್ಕೆ ಆಹಾರದ ಪದಾರ್ಥಗಳನ್ನು ಅಳತೆ ಮಾಡಿ ಕೊಡುವುದು, ಇಂತಿಷ್ಟೇ ಆಹಾರವನ್ನು ತಯಾರಿಸಬೇಕು ಎಂದು ಅವಳು ಮಾಡುವ ಕಟ್ಟುನಿಟ್ಟು ಕುಟುಂಬ ನಿರ್ವಹಣೆ ಎಂದು ಅರ್ಥೈಸಿಕೊಳ್ಳಬಹುದು. ಏಕೆಂದರೆ ಜನಪದ ಹೆಣ್ಣು ಮಕ್ಕಳಿಗೆ ನಾಳಿನ ಭವಿಷ್ಯದ ಚಿಂತೆ ಕಾಡುತ್ತಿರುತ್ತದೆ. ಭವಿಷ್ಯದ ಚಿಂತೆಯೊಳಗಡೆ ಬೇವಿನಹಟ್ಟಿ ಕಾಳಮ್ಮ ಪಾತ್ರಳಾಗಿರಬಹುದು. "ಏನಲೇ ನನ್ನ ಸವತಿ ಮಗಳೇ, ಹಾಲು, ಅನ್ನ, ಪಾಲು ಪಂಚಾಮೃತ ಮಾಡಿದ್ರೆ, ಇಷ್ಟು ಗಾತ್ರ ಬದುಕನ್ನು ನಾನು ಸಂಪಾದ್ನೆ ಮಾಡ್ತಿದ್ನ" ಎಂದು ಕಾಳಮ್ಮ ಹೇಳುತ್ತಾಳೆ. ಇದು ಕಾಳಮ್ಮನ ಶ್ರೀಮಂತಿಗೆ ಕಾರಣವಾದದ್ದು ಅವಳ ಸರಳತೆಯಿಂದ ಕೂಡಿದ ಬದುಕು. ಕಾಳಮ್ಮ ಎಂದು ಐಷರಾಮಿಯ ಬದುಕನ್ನು ನಡೆಸಿದವಳಲ್ಲ. ಕಾಳಮ್ಮ ಜೀವಿಸುತ್ತಿದ್ದ ಕಾಲಘಟ್ಟದಲ್ಲಿ ಎಳ್ಳಿಗೆ ಇರಬಹುದಾದ ಮಹತ್ವ ಎಂತಹದ್ದು ಎಂದು ತಿಳಿಯಬಹುದು.

ಮಹದೇಶ್ವರನೊಳಗಡೆ ಒಂದು ಹಠವಿದೆ. ಏನಾದರೂ ಮಾಡಿ ಬೇವಿನಹಟ್ಟಿ ಕಾಳಮ್ಮನನ್ನು ಒಕ್ಕಲಾಗಿಸಿಕೊಳ್ಳಬೇಕು, ಇವಳನ್ನು ಮಣಿಸಬೇಕು ಎಂಬ ಹಠವಿದೆ. ನಾಸ್ತಿಕವಾದಿಯಾಗಿ ಕಾಳವ್ವೆ ರೂಪುಗೊಳ್ಳುತ್ತಿರಬೇಕಾದರೆ ಅವಳನ್ನು ಆಸ್ತಿಕರಾಗಿ ಇರಿಸುವ ಪ್ರಯತ್ನ ಮಹದೇಶ್ವರನಲ್ಲಿದೆ. ಬೇವಿನಹಟ್ಟಿ ಕಾಳಮ್ಮಳನ್ನು ತನ್ನ ಪಂಥದ ಅನುಯಾಯಿಯಾಗಿ ಮಾಡಿಕೊಳ್ಳುವ ವ್ಯವಸ್ಥೆಯನ್ನು ಮಹದೇಶ್ವರ ಸೃಷ್ಟಿಸುತ್ತಿದ್ದಾನೆ. ಇಲ್ಲಿ ಮಾತೃಮೂಲ ಸಂಸ್ಕೃತಿ ದಮನ, ಪಿತೃಮೂಲ ಸ್ಥಾಪನೆಯನ್ನು ಕಾಣಬಹುದು.

ಮಹದೇವಮ್ಮನ ಮನೆಗೆ ಹೋದಂತಹ ಮಾದೇಶ್ವರರಿಗೆ ಮಹದೇವಮ್ಮ ಊಟ ನೀಡುತ್ತಾಳೆ, ಹಾಲು ಕೊಡುತ್ತಾಳೆ. ನಿನ್ನ ಮನೆ ಬಿಟ್ಟು ಹೋಗುವುದಕ್ಕೆ ಇಷ್ಟವಿಲ್ಲ. ನೀನು ಅಡುಗೆ ಮಾಡುವಂತಹ ಹೊಲದಲ್ಲಿ ನಿನ್ನ ಪಾದ ಊರುತ್ತೇನೆ ಎಂದಾಗ ಇದಕ್ಕೆ ಮಹದೇವಮ್ಮ ವಿರೋಧಿಸುತ್ತಾಳೆ. ಯಾವ ಮಾತನ್ನು ಹೇಳಿದರೂ

ಈ ಮಾತನ್ನು ಹೇಳಬೇಡಿ. 'ಇರೋದೆ ಒಂದಂಕಣ ಜೋಪಡಿ. ನಿಮಗೆ ಜಾಗ ಕೊಟ್ಟುಬಿಟ್ಟು ನಾವು ಎಲ್ಲಿಗೆ ಹೋಗಬೇಕು' ಎಂದು ಮಹದೇಶ್ವರನನ್ನು ನಿಷ್ಠುರವಾಗಿ ವಿರೋಧಿಸುತ್ತಾಳೆ. ಮಹದೇಶ್ವರ ಸ್ಥಳಾವಕಾಶಕ್ಕಾಗಿ ಕೋರಿ ಕೊಳ್ಳುವುದು ಮಹದೇವಮ್ಮಳನ್ನೇ ಹೊರತು ಹಲಗೇಗೌಡನನ್ನಲ್ಲ. ಇಲ್ಲಿ ಹೆಣ್ಣಿನ ಅಸ್ಮಿತೆಯ ಗುರುತನ್ನು ಕಾಣಬಹುದಾಗಿದೆ. ಮಹದೇಶ್ವರ ಮೂಗಯ್ಯ –ರಾಮವ್ವೆ ದಂಪತಿಗಳಿಬ್ಬರನ್ನು ತನ್ನ ಒಕ್ಕಲಾಗಿಸಿಕೊಳ್ಳಲು ಮುಂದಾದಾಗ ರಾಮವ್ವೆ ನಿರಾಕರಿಸುತ್ತಾಳೆ. ಮಹದೇಶ್ವರ ಎಳ್ಳಿನ ಗುಳ, ರಾಗಿಯ ಗುಳವನ್ನು ಸುಟ್ಟರೂ ಆ ಮುನಿಗಳು ಬಂದು ಶಾಪ ಕೊಡುತ್ತಾರೆ ಎಂದು ಹೆದರಬೇಡಿ ಎಂದು ಹೇಳುತ್ತಾಳೆ. ನಮ್ಮ ಮನೆಯ ತೋಟದೊಳಗೆ ಎರಡು ಪಾತಿ ಕೀರೆ ಸೊಪ್ಪು ಇದೆ. ನಾವು ಉಪ್ಪಾರರು. ಮಾವನಹಳ್ಳಿ ಚೌಡ್ ಮಾಳಕ್ಕೆ ಹೋಗು. ಚೆನ್ನಾಗಿ ಬೆಳ್ಳಗೆ ಇರುವಂತಹ ಚೌಳ ಮಣ್ಣನ್ನೆಲ್ಲಾ ಕೆರೆದು ಗುಡ್ಡೆ ಹಾಕು. ನನ್ನ ಕಣದಲ್ಲಿರುವ ರಾಗಿಯಿಂದ ಅಂಬಲಿ ಕಾಯಿಸಿ ಕುಡಿದು, ನಾವು ಚೌಳದ ಮೂಲಕ ಚೌಳುಪ್ಪು ಮಾಡಿಕೊಂಡು ಜೀವನ ಮಾಡೋಣ. "ಆ ಮುನಿಗಳ ಸಾಪ ನಮ್ಗೇನು ಇಲ್ಲ" ಎಂದು ರಾಮವ್ವೆ ಹೇಳುತ್ತಾಳೆ. ಯಾವುದಕ್ಕೂ ಹೆದರದ, ಬಗ್ಗದ ರಾಮವ್ವೆ ಮಾತೃಮೂಲೀಯ ಕುಟುಂಬದ ಪ್ರತಿನಿಧಿಯಾಗಿ ಕಾಣುತ್ತಾಳೆ.

ಆದಿಪರಾಸಕ್ತಿ ಭೂಮಿ, ಸ್ವರ್ಗ, ಪಾತಾಳ ಹುಟ್ಟುವುದಕ್ಕೆ ಮೊದಲು ವಿಷ್ಣು, ಬ್ರಹ್ಮ, ಮಾದೇಶ್ವರ ಹುಟುವುದಕ್ಕೆ ಮೊದಲು ಮೂರು ದಿನಕ್ಕೆ ಮುಂಚೆ ಆದಿಸಕ್ತಿ ಹುಟ್ಟಿದ್ದಾಳೆ. ಲೋಕದಲ್ಲಿ ಅವಳು ಕಾಲವನ್ನು ಕಳೆಯುತ್ತಾ ಬರುತ್ತಾಳೆ. ಆದಿಸಕ್ತಿಗೆ ಯವ್ವನ ಬರುತ್ತದೆ. ಒಂದಾನು ಒಂದು ದಿನ ಆದಿಸಕ್ತಿ ಆಕಾಶವನ್ನು ಅಂತು ನೋಡುತ್ತಾಳೆ.

**"ಅಹ್ಹಾ ನನ್ನ ಯವ್ವನಾವನ್ನು ತಪ್ಸುವಂತಾ**
**ಪುರುಸ್ರು ನನಗಿಲ್ಲವಲ್ಲ**
**ನನ್ನ ಗುದ್ದು ನನ್ನ ಸಕ್ತಿಯಿಂದ**
**ನಾನೇ ಪಡೀಬೇಕು"**

ಇಲ್ಲಿ ಆದಿಸಕ್ತಿ ತನಗೆ ಬಂದಂತಹ ಯವ್ವನವನ್ನು ಪುರುಷನ ಸಹಚರ್ಯದಿಂದ ಕಳೆಯಲು ಬಯಸುತ್ತಾಳೆ. ಪುರುಷನನ್ನು ಬಯಸಿ, ತನ್ನ ಶಕ್ತಿಯ ಮೂಲಕ ಬ್ರಹ್ಮನನ್ನು ಪಡೆಯುತ್ತಾಳೆ. ನಾಲ್ಕು ತಲೆ, ಎಂಟು ಕಾಲುಗಳನ್ನು ಹೊಂದಿರುವ ಬ್ರಹ್ಮನನ್ನು ಪಡೆಯುತ್ತಾಳೆ. ಆದಿಶಕ್ತಿ ಬ್ರಹ್ಮನನ್ನು ಕುರಿತು ಈ ರೀತಿಯಾಗಿ ಹೇಳುತ್ತಾಳೆ. 'ನಿನ್ನನ್ನು ನಾನು ಪಡೆದಿರುವುದಕ್ಕೆ ಕಾರಣವೇನೆಂದರೆ ನನಗೆ ಪರಾಯದ ಕಾಲ, ನಿಂಬೆ ಹಣ್ಣಿನ ರೀತಿ ಯೌವ್ವನ. ನೀನು ನನ್ನನ್ನು ಕಣ್ಣೆತ್ತಿ ನೋಡಿ ನನಗೆ ಪುರುಷನಾಗು. ನನ್ನ ವಿದ್ಯೆನ್ನೆಲ್ಲವನ್ನು ತೋರಿಕೊಡುತ್ತೇನೆ. ಪ್ರಪಂಚವೆಲ್ಲ ನಿನ್ನ ವಶವಾಗುತ್ತದೆ' ಎಂದು

ಹೇಳುತ್ತಾಳೆ. ತನಗೆ ಬೇಕಾದನ್ನು ದಕ್ಕಿಸಿಕೊಳ್ಳಲು ಹೊರಟಿರುವ ಆದಿಶಕ್ತಿಯನ್ನು ಹೆಣ್ಣಿನ ಅಸ್ಮಿತೆಯ ಭಾಗವಾಗಿ ಕಾಣಬಹುದು. ಪ್ರಕೃತಿಯ ನಿಯಮದಂತೆ ಯವ್ವನ ಕಾಲದಲ್ಲಿ ಹೆಣ್ಣಿನ ದೇಹದಲ್ಲಾಗುವ ಬದಲಾವಣೆ, ಬಯಕೆಗಳನ್ನು ಜನಪದರು ಮಲೆ ಮಹದೇಶ್ವರ ಕಾವ್ಯದ ಆದಿಸಕ್ತಿ ಕವಟ್ಲಿನಲ್ಲಿ ಹಿಡಿದಿಡುವ ಪ್ರಯತ್ನವನ್ನು ಮಾಡಿದ್ದಾರೆ. ಆದಿಶಕ್ತಿ ಆಡಿದ ಮಾತುಗಳನ್ನು ಆಲಿಸಿದ ಬ್ರಹ್ಮನು 'ನನ್ನನ್ನು ನೀನು ಪಡೆದಿದ್ದರಿಂದ ನೀನು ನನಗೆ ತಾಯಿಯಾಗಬೇಕು. ನೀನು ನನಗೆ ಪುರುಷನಾಗು, ಪತಿಯಾಗು ಎಂದು ಹೇಳುವುದು ಅಸಂಬದ್ಧ ನುಡಿಯಾಗಿದೆ. ನಾನು ನಿನ್ನನ್ನು ಕಣ್ಣೆತ್ತಿ ನೋಡಿದ್ದೆ ಸಾಚವಾದರೆ, ಈ ಪ್ರಪಂಚವೆಲ್ಲ ಕರ್ಮಕ್ಕೊಳಗಾಗಿ ಧರ್ಮ ಕಮ್ಮಿಯಾಗುತ್ತದೆ. ಹಾಗಾಗಿ ನೀನು ನನಗೆ ತಾಯಿ, ನಾನು ನಿನಗೆ ಮಗ, ಈ ಮಾತು ನಿನಗೆ ತರವಲ್ಲ' ಎಂದು ಬ್ರಹ್ಮನು ನುಡಿಯುತ್ತಾನೆ. ನನ್ನ ಮಾತನ್ನು ಮೀರಿದ್ದಕ್ಕೆ ನೀನು ಸುಟ್ಟು ಭಸ್ಮವಾಗು ಎಂದು ತನ್ನ ಹಸ್ತವನ್ನು ಅವನ ತಲೆಯ ಮೇಲೆ ಮಡಗುತ್ತಾಳೆ. ಆ ಹಸ್ತದಲ್ಲಿದ್ದ ಉರಿಗಣ್ಣಿನಿಂದ ಬ್ರಹ್ಮದೇವರು ಸುಟ್ಟು ಭಸ್ಮವಾಗುತ್ತಾರೆ. ಬ್ರಹ್ಮನು ಆದಿಸಕ್ತಿಗೆ ಪುರುಷನಾಗಿ ಅವಳ ಬಯಕೆಯನ್ನು ಪೂರೈಸದ ಕಾರಣ, ತನ್ನ ಶಕ್ತಿಯಿಂದ, ತನ್ನ ಗುದ್ದುವಿನಿಂದ ಎರಡನೆಯ ಮಗುವಾಗಿ ವಿಷ್ಣುವನ್ನು ಪಡೆಯುತ್ತಾಳೆ. ಆಗ ವಿಷ್ಣು ಶ್ರೀ ಕೃಷ್ಣನ ರೂಪದಲ್ಲಿ ಸೌಂದರ್ಯಶಾಲಿಯಾಗಿ ಕಾಣುತ್ತಾನೆ. ಆದಿಶಕ್ತಿ ಮಹಾವಿಷ್ಣುವಿನ ಮುಖ ನೋಡಿ ನಗುತ್ತಾಳೆ. ಮಹಾವಿಷ್ಣು ಆದಿಶಕ್ತಿಯನ್ನು ನಗಲು ಕಾರಣವನ್ನು ಕೇಳುತ್ತಾನೆ. ನನ್ನ ಯವ್ವನವನ್ನು ತೀರಿಸುವ ಗಂಡನಾಗುವುದಕ್ಕಾಗಿ ನಿನ್ನನ್ನು ಪಡೆದಿದ್ದೇನೆ ಎನ್ನುತ್ತಾಳೆ. ಹೆತ್ತತಾಯಿಗೆ ಮಗನೇ ಗಂಡನಾಗುವುದು ಧರ್ಮವಲ್ಲ. ನೀನು ನನ್ನನ್ನು ಪಡೆದಿರುವುದರಿಂದ ನೀನು ನನಗೆ ತಾಯಿ. ಆದ ಕಾರಣ ನಿನಗೆ ನಾನು ಪುರುಷನಾಗುವುದಿಲ್ಲ ಎಂದಾಗ, ಆದಿಶಕ್ತಿ ತನ್ನ ಉರಿಗಣ್ಣಿನ ಹಸ್ತವನ್ನು ತೆಗೆದು ವಿಷ್ಣುವಿನ ನೆತ್ತಿಯ ಮೇಲೆ ಮಡಗಿದಾಗ, ವಿಷ್ಣು ಸುಟ್ಟು ಭಸ್ಮವಾಗುತ್ತಾನೆ.

**"ಛೇ ಇಂತೆ ಅನ್ನೇಕಾರರನ್ನೆಲ್ಲ ಪಡುದಿ**
**ನನ್ನ ಕಣ್ಣೆತ್ತಿ ಯವ್ವಾನವನ್ನು ತೀರುಸ್ನಿಲ್ಲವಲ್ಲ"**

ಎಂದು ಯೋಚನೆ ಮಾಡುತ್ತಾಳೆ. ಬರುತ್ತ, ಬರುತ್ತ ಆದಿಶಕ್ತಿಗೆ ಯವ್ವನ ಉಕ್ಕಿ, ಸ್ವಲ್ಪ ಕಾಲ ಕಳೆದ ಮೇಲೆ ಮುಕ್ಕಣ್ಣನಾಗಲಿ, ಇನ್ನೊಬ್ಬನನ್ನು ಪಡೆಯಬೇಕು ಎಂದು, ಕಣ್ಣೆತ್ತಿ ನೋಡಲಿ, ನೋಡದಿರಲಿ, ಯೌವ್ವನವನ್ನು ತೀರಿಸಲಿ, ತೀರಿಸದಿರಲಿ ಇನ್ನೊಬ್ಬನನ್ನು ಪಡೆದು, ಪ್ರಪಂಚಕ್ಕೆ ಬೆಳಕನ್ನು ಉಂಟು ಮಾಡಬೇಕು ಎಂಬುದಾಗಿ ತನ್ನ ಮಾಯದ ಗುದ್ದುವಿನಿಂದ ಶಿವ ಮಾದೇವನನ್ನು ಪಡೆಯುತ್ತಾಳೆ.

ಆದಿಶಕ್ತಿ ಮಾದೇಶ್ವರನನ್ನು ಕುರಿತು ಈ ರೀತಿಯಾಗಿ ಹೇಳುತ್ತಾಳೆ.

**"ಅಪ್ಪಾ ಮಗುವೆ**

**ನಿನ್ನುನ್ನ ನಾನು ಯಾತುಕ್ಕೆ ಪಡುದಿದ್ದೀನಿ ಅಂದ್ರೆ**
**ಯವ್ವಾನ ತಪ್ಪಿಸೋದಕ್ಕೋಸ್ಕರ**
**ನಿನ್ನುನ್ನ ನಾನು ಪಡುದಿದ್ದೀನಪ್ಪ**
**ನಿನ್ನ ವಸಾ ನಾನಾಯ್ತೀನಿ**
**ನನ್ನ ವಸಾ ನೀನಾಗಪ್ಪ**
**ನೀನು ನನಗೆ ಪುರುಸನಾಗ್ನಿ**
**ಸುಕಾಭೋಗುವನ್ನ ಕೊಡಪ್ಪ''**

ಎನ್ನುತ್ತಾಳೆ. ನನ್ನ ಯವ್ವನವನ್ನು ತಪ್ಪಿಸಿ, ನೀನು ನನಗೆ ಪುರುಷನಾಗಿ, ಸುಖ ಭೋಗವನ್ನು ಕೊಡು ಎಂದು ಹೇಳುತ್ತಾಳೆ. ನೀನು ನನಗೆ ಪುರುಷನಾಗು, ನಾನು ಮಡದಿಯಾಗುತ್ತೇನೆ ಎಂದು ಹೇಳುತ್ತೀಯಲ್ಲ, ಹೆತ್ತತಾಯಿ, ಹುಟ್ಟಿದ ಮಕ್ಕಳು ಒಂದಾಗಲೂ ಸಾಧ್ಯವೇ? ಇದು ನಿನಗೆ ತರವಲ್ಲ. ಹೆತ್ತತಾಯಿ, ಹುಟ್ಟಿದ ಮಗು ಇಬ್ಬರೂ ಒಂದೇ ಆದದ್ದು ನಿಜವಾದರೆ, ಧರ್ಮ ಹಾಳಾಗುತ್ತದೆ. ಕರ್ಮ ಹೆಚ್ಚಾಗುತ್ತದೆ. ಇದು ನಿನಗೆ ತರವಲ್ಲ, ನಾನು ಮಾತ್ರ ನಿನ್ನನ್ನು ಕಣ್ಣೆತ್ತಿ ನೋಡಲ್ಲ ಎಂದು ಮಾದೇಶ್ವರರು ಹೇಳುತ್ತಾರೆ. ಆದಿಶಕ್ತಿ ಮಹದೇಶ್ವರನನ್ನು ಕುರಿತು ಈ ರೀತಿಯಾಗಿ ಹೇಳುತ್ತಾರೆ. ನಾನು ನೀನು ಗಂಡ– ಹೆಂಡ್ತಿಯಾಗಿ ಬಾಳಾಟ ನಡೆಸದೇ ಹೋದರೆ, ಪ್ರಪಂಚಕ್ಕೆ ಸುಳೀನೆ ಇರುವುದಿಲ್ಲ. ಕವಿದಿರುವಂತಹ ಕತ್ತಲನ್ನು ಕಳಿಯುವುದಿಲ್ಲ. ಪ್ರಪಂಚಕ್ಕೆ ಬೆಳಕಾಗುವುದು ಹೇಗೆ, ಮಕ್ಕಳಾಗಿ ಬಾಳಾಟ ಮಾಡುವುದು ಹೇಗೆ, ಹೇಡಿ ಮಾತುಗಳನ್ನಾಡಿ ಕೆಡಬೇಡ ನನಗೆ ನೀನು ಪುರುಷನಾಗು ಎನ್ನುತ್ತಾಳೆ. ಮಾದೇಶ್ವರರು ಲೋಕಕ್ಕೆ ಬೆಳಕಾಗಲಿ ಎಂದು ನನ್ನನ್ನು ಪಡೆದದ್ದು ಸರಿಯಾಗಿದೆ. ನಿನಗೆ ನಾನು ಪತಿಯಾಗುವುದರಿಂದ ಆಗಬಹುದಾದ ದುಷ್ಪರಿಣಾಮಗಳನ್ನು ಕುರಿತು ಮಹದೇಶ್ವರ ಹೇಳುತ್ತಾರೆ. 'ನಿನಗೆ ನಾನು ಪತಿಯಾಗಿ, ನನಗೆ ನೀನು ಸತಿಯಾದರೆ ಕಾಮಧೇನು ಕರೆಯೋದಿಲ್ಲ, ಭೂಮಿತಾಯಿ ಬೆಳೆಯೋದಿಲ್ಲ, ಮೋಡ ಕಟ್ಟಿ ಮಳೆಯಾಗುವುದಿಲ್ಲ, ಅಗ್ನಿ ದೇವತೆ ಅರುಗಾಯ್ತಳೆ, ಗಂಗಮ್ಮ ಮರೆಯಾಗುತ್ತಾಳೆ' ಎಂದು ಮಹದೇಶ್ವರ ಹೇಳುತ್ತಾರೆ. ಅದಕ್ಕೆ ಆದಿಶಕ್ತಿ ಈ ರೀತಿ ಪ್ರತಿಕ್ರಿಯಿಸುತ್ತಾಳೆ. ಹರಿ, ಹರ, ಅಗ್ನಿ ದೇವತೆ, ಗಂಗೆ ದೇವಮಾನರು ನನ್ನ ಕರದಲ್ಲಿ ಕುಳಿತ್ತಿದ್ದಾರೆ. ನನ್ನ ಹೃದಯದಲ್ಲಿ ಈ ಪ್ರಪಂಚವೇ ತುಂಬಿಕೊಂಡಿದೆ.

**''ನನಗಿಂತ ದೊಡ್ಡವರು ಇನ್ಯಾರಿದ್ದರು ನನಕಂದ?**
**ಪ್ರಪಂಚ ತ್ರಿಷ್ಟೆ ಮಾಡೋದು ನನ್ನ ಕೈನಲ್ಲೈತೆ**
**ಪ್ರಪಂಚುವನ್ನು ಭಸ್ಮ ಮಾಡೋದು ನನ್ನ ಕೈನಲ್ಲೈತೆ''**

ಈ ರೀತಿಯ ಆದಿಶಕ್ತಿಯ ಮಾತುಗಳಲ್ಲಿ ಮಲೆಮಹದೇಶ್ವರ ಕಾವ್ಯವು ಸೃಷ್ಟಿಯ ಕಾರ್ಯವನ್ನು ಹೆಣ್ಣಿನಲ್ಲಿ ಕಾಣಿಸಿದ್ದು, ಇಲ್ಲಿ ಹೆಣ್ಣಿನ ಅಸ್ಮಿತೆಯನ್ನು ಕಾಣಬಹುದು.

ಮಾದೇಶ್ವರರು ಪ್ರಪಂಚಕ್ಕೆ ನೀನು ದೊಡ್ಡವಳಾ? ಎಂದು ಕೇಳಿದಾಗ "ಹೌದಪ್ಪ ನಾನು ಆದಿಸಕ್ತಿ" ಎಂದು ಹೇಳುವುದಲ್ಲಿ ಮಲೆ ಮಹದೇಶ್ವರ ಕಾವ್ಯದಲ್ಲಿ ಹೆಣ್ಣಿನ ಅಸ್ಮಿತೆಯ ನೆಲೆಗಳನ್ನು ಕಾಣಬಹುದು.

ಮಂಟೇಸ್ವಾಮಿ ಕಾವ್ಯದಲ್ಲಿ ಧರೆಗೆ ದೊಡ್ಡವರಾಗಿ ಮಂಟೇಸ್ವಾಮಿ ಕಂಡುಬಂದರೆ, ಮಲೆ ಮಹದೇಶ್ವರ ಕಾವ್ಯದಲ್ಲಿ ಆದಿಶಕ್ತಿ ಪ್ರಪಂಚಕ್ಕೆ ದೊಡ್ಡವಳಾಗಿದ್ದಾಳೆ. ಇಲ್ಲಿ ಮಹದೇಶ್ವರನನ್ನು ಆದಿಶಕ್ತಿ ಪಡೆದಿದ್ದಾಳೆ. ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ಶಿವನನ್ನು ಒಬ್ಬ ಹೆಣ್ಣು ಸೃಷ್ಟಿಸಿದ್ದಾಳೆ. ಇವರನ್ನು ತನ್ನ ಯೌವ್ವನವನ್ನು ತೀರಿಸುವುದಕ್ಕೆ ಪಡೆದಿದ್ದಾಳೆ. 'ನಿನಗೆ ನಾನು ಪುರುಷನಾಗಬೇಕಾದರೆ, ಸತಿಗಿಂತಲೂ ಪತಿ ಶಕ್ತಿವಂತನಾಗಿರಬೇಕು. ಆದ್ಧರಿಂದ ನೀನು ಕಲಿತಿರುವ ಎಲ್ಲಾ ವಿದ್ಯೆಯನ್ನು ನನಗೆ ಕಲಿಸು' ಎಂದು ಮಹದೇಶ್ವರ ಆದಿಶಕ್ತಿಗೆ ಹೇಳುತ್ತಾರೆ. ಆದಿಶಕ್ತಿಯ ಕೈ ಬೆರಳಿನಲ್ಲಿ ಒಂದು ಉಂಗುರವಿತ್ತು. ಉಂಗುರವನ್ನು ಕಳೆದು ಕೆಳಗೆ ಇಟ್ಟರೆ, ಮುಂದಕ್ಕೆ ಹೆಜ್ಜೆ ಮಡಗಲು ನನಗೆ ತ್ರಾಣ ಇರುವುದಿಲ್ಲ. ನನ್ನ ಹಸ್ತದಲ್ಲಿ ಉರಿಗಣ್ಣು ಇಲ್ಲವಾದರೆ, ನನ್ನ ಪ್ರಾಣವೇ ಇರುವುದಿಲ್ಲ. ನನ್ನ ಉರಿಗಣ್ಣು ನನಗಿರಲಿ, ನನ್ನ ಬೆರಳಿನಲ್ಲಿರುವ ಮುದ್ರೆ ಉಂಗುರವನ್ನು ನೀನು ಧರಿಸಿಕೊಂಡರೆ, ಈ ಒಂದು ಉಂಗುರದಲ್ಲಿ ಪ್ರಪಂಚವೆಲ್ಲ ನಿನಗೆ ಕಾಣುತ್ತದೆ ಎಂದು ಆದಿಶಕ್ತಿ ಉಂಗುರವನ್ನು ಮಹದೇಶ್ವರನಿಗೆ ನೀಡುತ್ತಾಳೆ. ಹೀಗೆ ಆದಿಶಕ್ತಿಯಿಂದ ವಿದ್ಯೆ, ಬುದ್ಧಿಯನ್ನು ಮಹದೇಶ್ವರ ಕಲಿಯುತ್ತಾರೆ. 'ನಿನ್ನಲ್ಲಿದ್ದ ಮಾಯಾಶಕ್ತಿಯನ್ನು ನಾನು ಪಡೆದ ಮೇಲೆ ನಾನ್ಹೆಚ್ಚೊ, ನೀನ್ಹೆಚ್ಚೊ 'ಎಂದು ಮಹದೇಶ್ವರರು ಕೇಳುತ್ತಾರೆ. ಆದಿಶಕ್ತಿ ಮಹದೇಶ್ವರರನ್ನು ಪಡೆದು, ಅವರಿಗೆ ವಿದ್ಯೆ ಕಲಿಸಿದ ಕಾರಣದಿಂದಾಗಿ ತಾನೇ ಹೆಚ್ಚು ಎಂದು ಹೇಳುತ್ತಾರೆ. ಎದುರು ಬದುರಿಗೆ ನಿಂತುಕೊಂಡು ನಾಟ್ಯವಾಡಿದರೆ ನಿನಗೆ ಯವ್ವನ ಹೆಚ್ಚಾಗುತ್ತದೆ. ಆಗ ನಾನು ನಿನಗೆ ಪುರುಷನಾಗುತ್ತೇನೆ ಎಂದಾಗ ನಾಟ್ಯವನ್ನು ಆಡಲು ಪ್ರಾರಂಭಿಸುತ್ತಾಳೆ. ನಾಟ್ಯವಾಡಿ ಆಯಾಸವಾಗುತ್ತಿರುವುದನ್ನು ಕಂಡ ಮಹದೇಶ್ವರ ತನ್ನ ಬಲದ ಕೈಯನ್ನು ಎತ್ತಿ ತನ್ನ ನೆತ್ತಿಮ್ಯಾಲೆ ಮಡಗಿ ತೋರಿಸುತ್ತಾರೆ. ಆದಿಶಕ್ತಿ ತನ್ನ ಕೈಯಲ್ಲಿ ಉರಿಗಣ್ಣಿರುವುದನ್ನು ಮರೆತು, ತನ್ನ ಬಲಗೈ ತೆಗೆದು ನೆತ್ತಿ ಮೇಲೆ ಮಡಗಿದಾಗ ಆದಿಶಕ್ತಿ ಸುಟ್ಟು ಭಸ್ಮವಾಗುತ್ತಾಳೆ.

ಮಾತೃಪ್ರಧಾನ ನೆಲೆಯೊಂದನ್ನು ಪಿತೃಪ್ರಧಾನ ನೆಲೆಯನ್ನಾಗಿ ಪರಿವರ್ತಿಸಿದ ಕಾಲಘಟ್ಟದ ರೂಪಕವಾಗಿ ಈ ಪ್ರಸಂಗವು ಮಲೆಮಹದೇಶ್ವರ ಕಾವ್ಯದ 'ಆದಿಶಕ್ತಿ ಕವಟ್ಲು' ಭಾಗ ಅಭಿವ್ಯಕ್ತಿಸುತ್ತದೆ.

'ಮಾದೇವ ಭೂಮಿಗೆ ಬಂದ ಕವಟ್ಲಿನಲ್ಲಿ ನಂದಿ ಮಹಾ ಕೈಲಾಸದಲ್ಲಿ ಏಳುಮಲೆ ಕರ್ತೃ, ಏಕಾಂಗಿ ವಸ್ತು ಮಾದೇವ ಪಾರ್ವತಿ ಸಹಿತವಾಗಿ ಕುಳಿತ್ತಿದ್ದಾರೆ.

ದುಷ್ಟನಾದ ಶ್ರವಣಯ್ಯ ದೇವಮಾನವರೆಲ್ಲ ಸೆರೆಮಾಡಿ, ಈಗ ನನ್ನನ್ನು ಸೆರೆಮಾಡುವುದಕ್ಕೆ ಬರುತ್ತಿದ್ದಾನೆ ಎಂದು ಮಾದೇಶ್ವರ ಕಲ್ಲಾಗುತ್ತಾರೆ. ಭೂಲೋಕದಿಂದ ಶ್ರವಣಯ್ಯ ಮಹಾಕೈಲಾಸಕ್ಕೆ ಬರುತ್ತಾನೆ. ಮಹಾಕೈಲಾಸದಲ್ಲಿ ಪರಮೇಶ್ವರನಾದ ಮಹದೇಶ್ವರ, ಕಲ್ಲಿಂಗವಾಗಿದ್ದರಿಂದ, ಶ್ರವಣಯ್ಯನಿಗೆ ಶಿವ ಕಾಣಲಿಲ್ಲ. ಮಹಾಪಾರ್ವತಿ ಕುಳಿತ್ತಿದ್ದನ್ನು ಕಂಡು, ಶ್ರವಣಯ್ಯ ಬಂದು, ಮಹಾತಾಯಿಯಾದ ಪಾರ್ವತಿಯನ್ನು ಕಂಡು " ಅಮ್ಮ ತಾಯಿ ಶಿವಾ ಎಲ್ಲಮ್ಮ?" ಎಂದು ಕೇಳಿದಾಗ ನನಗೆ ಗೊತ್ತಿಲ್ಲ ಎಂದು ಹೇಳುತ್ತಾಳೆ. ಗಂಡ ಎಲ್ಲೋಗಿದ್ದಾನೆ ಎನ್ನುವುದು ಹೆಂಡತಿಗೆ ತಿಳಿದಿಲ್ಲ ಎಂದ ಮೇಲೆ, ಹೆಂಡತಿ ಎಲ್ಲೋಗಿದ್ದಾಳೆ ಎನ್ನುವುದು ಗಂಡನಿಗೆ ಗೊತ್ತಾಗಲಿ ಎಂದು ಮಹಾತಾಯಿಯನ್ನು ಸೆರೆ ಮಾಡುತ್ತಾನೆ.

ಬ್ರಹ್ಮಲೋಕಕ್ಕೆ ಬಂದ ಶ್ರವಣಯ್ಯ ಶಾರದೆ, ಸರಸ್ವತಿ ಇವರಿಬ್ಬರನ್ನು ಸೆರೆ ಮಾಡಿಕೊಂಡು, ವಿಷ್ಣುಲೋಕಕ್ಕೆ ಬರುತ್ತಿರುವುದು ವಿಷ್ಣುವಿಗೆ ತಿಳಿಯಿತು. ಆಗ ವಿಷ್ಣು ತನ್ನ ಮಡದಿಯಾದ ಲಕ್ಷ್ಮೀ ದೇವಿಯನ್ನು ಕರೆದುಕೊಂಡು ವೈಕುಂಠವನ್ನು ಬಿಟ್ಟು ನಡೆಯುತ್ತಾರೆ. ಶ್ರವಣಯ್ಯ ವೈಕುಂಠಕ್ಕೆ ಬಂದು ನೋಡಿದಾಗ, ಅಲ್ಲಿ ವಿಷ್ಣು ಇರಲಿಲ್ಲ.

**"ಸಾರದೆ ಸರಸ್ವತಿ ಮಾತಾಯಿ ಪಾರ್ವತಮ್ಮನ**
**ಧರಧರ್ನೆ ಎಳ್ಕೊಂಡೋಯ್ತಿದ್ರೆ ಮಾತಾಯಿ ಸಪ್ತ**
**ಗಂಗಾ ಭವಾನಿಗೆ ಕಳುಸ್ತಂತೆ"**

ಗಂಗಮ್ಮನವರು ಓಡಿ ಬಂದು ಶ್ರವಣಯ್ಯನನ್ನು ಅಡ್ಡಗಟ್ಟುತ್ತಾಳೆ. ಗಂಗಮ್ಮನ ನೋಡಿ ಶ್ರವಣಯ್ಯನಿಗೆ ನಗು ಬರುತ್ತದೆ.

**"ಅಯ್ಯೋ ಗಂಗಮ್ಮ ಹೆಂಗ್ರುಸ್ರು ಬುದ್ಧಿ ಮಂಡಿಯಿಂದ ಕೆಳಕಲ್ವ**
**ತಾನಾಗಿ ಬಂದು ಸೆರೆಯಾಗೋಗ**
**ನಿನ್ನ ನಾನು ಬುಡೋದು ತರುವಲ್ಲ"**

ಎಂದು ಗಂಗಮ್ಮ ತಾಯಿಯ ಮಾರುದ್ದ ತಲೆಗೂದಲನ್ನು ಹಿಡಿದು ಶ್ರವಣಯ್ಯ ಸೆರೆ ಮಾಡಿದ್ದಾರೆ. ಶ್ರವಣಯ್ಯ ಹೆಣ್ಣಾದವಳು ತನಗೆ ಇದ್ದ ಸೀಮಿತತೆಯನ್ನು ಮೀರಿದನ್ನು ವ್ಯಂಗ್ಯವಾಗಿ ನೋಡುವುದರ ಮೂಲಕವೇ ಅವಳನ್ನು ಸೆರೆ ಮಾಡುತ್ತಾನೆ. ಗಂಡಸನ್ನು ಎದುರುಗೊಳ್ಳುವ ಶಕ್ತಿ ಹೆಣ್ಣಿಗಿಲ್ಲ ಎಂಬುವುದು ಶ್ರವಣಯ್ಯನ ನಿಲುವಾಗಿದೆ. ಗಂಗೆ, ಗೌರಿ, ಸರಸ್ವತಿ, ಶಾರದಾಂಬೆ ಇವರನ್ನೆಲ್ಲ ತಂದು ಬಂಕಾಪುರಿ ಶ್ರವಣದೊರೆ, ತನ್ನ ಅರಮನೆಯಲ್ಲಿ ಕೆಲಸ ಮಾಡುವುದಕ್ಕೆ ಗೌಡಿರನ್ನಾಗಿ ನೇಮಿಸಿಕೊಂಡು, ಅವರಿಂದ ಜೀತ ಮಾಡಿಸುತ್ತಿದ್ದಾನೆ. ಶ್ರವಣಯ್ಯನು ತನ್ನ ಅರಮನೆಯ ಮುಂದಾರದಲ್ಲಿದ್ದ ಹೂವಿನ ತೋಟಕ್ಕೆ ನೀರುಯ್ಯುವ ಕೆಲಸವನ್ನು ಮಹಾತಾಯಿ ಪಾರ್ವತಿಗೆ ವಹಿಸಿದ್ದನು.

**"ಹುವ್ವಿನ ಚಮಾಲ್ಗೆ ನೀರುಯ್ತಿದ್ರೆ**

**ಅವಳ ಚಂದ ಚಾರ ಚಲ್ವ ಭಾವ ದಪ್ಪ ದುಡುವನ್ನು**
**ಎರಡು ನೇತ್ರುದಿಂದ ಶ್ರವಣಯ್ಯ ನೋಡುದ್ನಂತೆ''**

ಶ್ರವಣಯ್ಯನಿಗೆ ಪಾರ್ವತಿ ಮೇಲೆ ಮನಸ್ಸಾಗಿ, ಹೂವಿನ ತೋಟಕ್ಕೆ ನೀರುಯ್ಯುತ್ತಿದ್ದ ಪಾರ್ವತಿಯನ್ನು ಹಿಂದೆಯಿಂದ ಬಂದು ತಬ್ಬಿಕೊಳ್ಳುತ್ತಾನೆ. ಇದರಿಂದ ಪಾರ್ವತಿ ದುಃಖವನ್ನು ಪಡುತ್ತ, ಇವನು ನನ್ನ ಮನಸ್ಸನ್ನು ಕೆಡಿಸುತ್ತಾನೆ. ನನ್ನ ಪತಿವ್ರತಾ ಧರ್ಮ ಹಾಳಾಗುತ್ತದೆ. ಲೋಕಕ್ಕೆಲ್ಲಾ ನಾನು ತಾಯಿ ಎನ್ನುವುದನ್ನು ಮರೆತಿದ್ದಾನೆ.

**''ಹೆಂಡಾ ಕುಡಿಯೋನ್ಗೆ ಬುಂಡ್ಯೆ ಹೆಂಡ್ತಿ ಅನ್ನೋಹಂಗೆ**
**ಭಕ್ತ್ರ ಭಕ್ತ್ರ ಅಂತೇಳಿ ಇಂತೇ ವರುವನ್ನು ಈ ಮುಂಡೇ ಮಗುಂಗೆ ಕೊಟ್ಟು**
**ನಿನ್ಹೆಂಡ್ರು ಹಾಳಾದ್ರು ನೀನೆಲ್ಲಿದೆಯೊ ಹಾಳ್ಮನೆ ಶಿವುನೆ**
**ನನ್ನ ಕಾಪಾಡೋರಿಲ್ಲವಲ್ಲ ಮಾದೇವ''**

ಶಿವನಿಂದ ಎಲ್ಲರನ್ನು ಸೆರೆ ಮಾಡಿಕೊಳ್ಳುವ ವರವನ್ನು ಪಡೆದ ಶ್ರವಣಯ್ಯ, ಶಿವನ ಹೆಂಡತಿಯಾದ ಪಾರ್ವತಿಯನ್ನು ಸೆರೆ ಮಾಡಿಕೊಂಡಿದ್ದರ ಸಂಗತಿಯನ್ನು ನೆನೆದು ಪಾರ್ವತಿ ದುಃಖವನ್ನು ಪಡುತ್ತಾ, ತನಗೆ ಒದಗಿ ಬಂದಿರುವ ಕಷ್ಟದಿಂದ ತನ್ನನ್ನು ಪಾರು ಮಾಡು ಎಂದು ಶಿವನಲ್ಲಿ ಮೊರೆ ಹಿಡುತ್ತಿದ್ದಾಳೆ. ಪಾರ್ವತಿಯ ಕಣ್ಣೀರು, ಕಲ್ಲಾಗಿ ನಿಂತಿದ್ದ ಮಹದೇಶ್ವರನ ನೆತ್ತಿಯ ಮೇಲೆ ಬೀಳುತ್ತಿತ್ತು. ಮಹದೇಶ್ವರ ಕಿಡುಕಿಡನೆ ಕಣ್ಣನ್ನು ಬಿಟ್ಟು ಗುಡುಗಿದ ತಕ್ಷಣ ಶ್ರವಣಯ್ಯನ ತೋಳಿಗೆ ಒಂದು ಬಂಡೆ ಉಂಟಾಗಿ, ಮಾಯದಿಂದ ಪಾರ್ವತಿಯನ್ನು ಕೈಲಾಸಕ್ಕೆ ಕರೆದುಕೊಳ್ಳುತ್ತಾರೆ. ಶ್ರವಣಯ್ಯ ಅರೆಕಲ್ಲು ಬಂಡೆಯನ್ನು ನೋಡಿ ರೋಷದಿಂದ ನೊರನೊರನೆ ತನ್ನ ಹಲ್ಲನ್ನು ಕಡಿಯುತ್ತಾನೆ. 'ಇದೆಲ್ಲ ಶಿವನ ಆಟ' ಎಂದು ಹೇಳುತ್ತ, ಶಿವ ಇದ್ದ ಕಾರಣ, ಪಾರ್ವತಿ ಶಿವನಲ್ಲಿ ಮೊರೆ ಇಟ್ಟಿದ್ದಾಳೆ. ಶಿವನನ್ನು ಸೆರೆ ಮಾಡಬೇಕು ಎಂದು ಶ್ರವಣಯ್ಯ ಕೈಲಾಸಕ್ಕೆ ಹೊರಡುತ್ತಾನೆ. ಶಿವನಿಗೆ ಶ್ರವಣಯ್ಯ ಬರುವುದು ತಿಳಿಯಿತು. ಶ್ರವಣಯ್ಯ ಬರುವುದನ್ನು ನೋಡಿದ ಪಾರ್ವತಿ,

**''ಪರಮಾತ್ಮ ಪಾಪಿಯಾದ ಶ್ರವಣಂಗೆ ಇಂತೇ ವರ ಕೊಟ್ರಲ್ಲ**
**ಬುಯ್ಲೋಕದಲ್ಲಿ ದೇವ ದೇವಮಾನ್ರ ಗತಿ ಹೇಳಕಾಗ್ದಲ್ಲ**
**ಇಂತೇ ವರುವ ಕೊಡಬೌದ?''**

ಎಂದು ಹೇಳುವ ಪಾರ್ವತಿಯ ಮಾತುಗಳಲ್ಲಿ ನೀವು ಶ್ರವಣಯ್ಯನಿಗೆ ಕೊಟ್ಟಿದ್ದ ವರದ ಕಾರಣದಿಂದ, ಭೂಲೋಕದಲ್ಲಿ ಶ್ರವಣಯ್ಯನಿಗೆ ಸೆರೆಯಾದ ದೇವಾನುದೇವತೆಗಳ ಸ್ಥಿತಿ ಚಿಂತಾಜನಕವಾಗಿದೆ. ಪಾರ್ವತಿಯ ಮಾತನ್ನು ಕೇಳಿದ ಶಿವನು ಅಲ್ಲಿ, ಇಲ್ಲಿ ಅವಿತುಕೊಂಡಿದ್ದಂತಹ ಸುರುಮುನ್ನೂರು ಕೋಟಿ ದೇವಮಾನವರನ್ನೆಲ್ಲ ಸೇರಿಸಿ 'ನಾನು ನರ ಅವತಾರವನ್ನು ಎತ್ತುವುದಕ್ಕಾಗಿ ಭೂಲೋಕಕ್ಕೆ ಹೋಗುತ್ತಿದ್ದೇನೆ. ಅದಕ್ಕೆ ಮೊದಲು ಒಂದು ಆರಾಧನೆಯನ್ನು

ಮಾಡುತ್ತೇನೆ' ಎಂದು ದೇವಮಾನವರನ್ನೆಲ್ಲ ಊಟಕ್ಕೆ ಕುಳ್ಳಿರಿಸಿ, ಊಟಕ್ಕೆ ಬಡಿಸುತ್ತಾನೆ. ದೇವ ಮಾನವರೆಲ್ಲ ಊಟವನ್ನು ಮಾಡುತ್ತಿರುವಾಗ ಒಬ್ಬ ಜಂಗಮಯ್ಯ " ಈ ಬಗೆಯ ಮೇಲುಸಕ್ರೆ ಇಲ್ದೆ ರುಚಿಕರವಾಗಿಲ್ದೆ ಇರುವ ಊಟವನ್ನ ಯಾರು ಮಾಡ್ತರಪ್ಪ?" ಎಂದು ಪ್ರಶ್ನಿಸುತ್ತಾಳೆ. ಆಗ ಮಾದೇಶ್ವರನು ತನ್ನ ಬೆವರನ್ನು ಕೆಳಗಡೆ ಹಾಕಿ, ಬೆವರಿನಿಂದ ಮೇಲಸಕ್ಕರೆ ಮತದ ಉಪ್ಪಲಿಗಸೆಟ್ಟಿಯನ್ನು ಪಡೆಯುತ್ತಾರೆ. ಆಗ ಉಪ್ಪಲಿಗ ಸೆಟ್ಟಿಗೆ ಮಹದೇಶ್ವರರು ಉಪ್ಪು ಮಣ್ಣನ್ನು ಗುಡಿಸಿ, ಉಪ್ಪಿನ ಸಾರವನ್ನು ತೆಗೆದು, ಆ ಸಾರದಲ್ಲಿ ಉಪ್ಪನ್ನು ಅಟ್ಕೊಂಡು ತರುವ ಕೆಲಸವನ್ನು ನೀಡುತ್ತಾರೆ. ಮಹದೇಶ್ವರರು ಅಗ್ನಿಯನ್ನು ಪಡೆಯುತ್ತಾರೆ. ಆ ಶರಣ ಬೇಗನೆ ಬಂದು ಮಣ್ಣಿನಲ್ಲಿ ಸಾರವನ್ನು ತೆಗೆದು, ಅದನ್ನು ಸುಂಡಿಸಿ, ಉಪ್ಪನ್ನು ತಯಾರಿಸಿಕೊಂಡು ಬರುತ್ತಾನೆ. ಈ ಮೂಲಕ ಉಪ್ಪನ್ನು ತಯಾರಿಸುವ ವಿಧಾನವನ್ನು ತಿಳಿದುಕೊಳ್ಳಬಹುದು. ಮಹದೇಶ್ವರ ಅಗ್ನಿ ಪಡೆಯುವುದನ್ನು ನೋಡಿದರೆ, ಮನುಷ್ಯ ಅಗ್ನಿಯನ್ನು ಕಂಡುಕೊಂಡ ಕಾಲಘಟ್ಟವಾಗಿರಬಹುದು. ಉಪ್ಪಲಿಗ ಸೆಟ್ಟಿ ಎನ್ನುವ ಜನ ಸಮುದಾಯಕ್ಕೆ ಉಪ್ಪನ್ನು ತಯಾರಿಸುವ ಕೌಶಲ್ಯವು ಇದ್ದ ಗುರುತುಗಳನ್ನು ಇಲ್ಲಿ ಕಾಣಬಹುದು.

ಶ್ರವಣಯ್ಯನಿಗೆ ವರ ಕೊಟ್ಟ ಶಿವ ಸ್ವರೂಪಿಯಾದ ಮಾದೇಶ್ವರನು, ಶ್ರವಣಯ್ಯನಿಗೆ ಹೆದರಿ ಕಲ್ಲಾಗುತ್ತಾರೆ. ಆದರೆ ಗಂಗಮ್ಮ ಶ್ರವಣಯ್ಯನನ್ನು ಅಡ್ಡಗಟ್ಟುತ್ತಾಳೆ. ಗಂಗಮ್ಮಳನ್ನು ಇಲ್ಲಿ ಹೆಣ್ಣಿನ ಅಸ್ಮಿತೆಯ ಭಾಗವಾಗಿ ಕಾಣಬಹುದು. ಪಾರ್ವತಿಯು ತನಗೆ ಒದಗಿದ ಸಂಕಟವನ್ನು ಶಿವನಲ್ಲಿ ಹೇಳಿಕೊಳ್ಳುವಾಗ ಹೆಂಡತಿಯ ಕಷ್ಟವನ್ನು ಪಾರು ಮಾಡದೆ, 'ನೀನೆಲ್ಲಿದೆಯೊ ಹಾಳ್ಮನೆ ಶಿವನೆ'ಎಂದು ಶಿವನ ಮೇಲೆ ವ್ಯಕ್ತಪಡಿಸುವ ಕೋಪವು ಕೂಡ ಹೆಣ್ಣಿನ ಅಸ್ಮಿತೆಯ ಭಾಗವಾಗಿ ನೋಡಬಹುದಾಗಿದೆ.

ಚಾಮುಂಡಿ ಕವಟ್ಟಿನಲ್ಲಿ ಸಾಕ್ಷಾತ್ ಶಿವ ಮತ್ತು ಪಾರ್ವತಿಯು, ಲಕ್ಷ್ಮಿ ಮತ್ತು ವಿಷ್ಣುವಿಗೆ ಬಂಗಾರಗಿರಿ ಕೈಲಾಸವನ್ನು ಉಂಟು ಮಾಡುತ್ತಾರೆ. ಮುಂದುವರೆದು ಉತ್ತರ ದೇಶವನ್ನು ಬಿಟ್ಟು, ನಾನಾರು ದೇಶಗಳನ್ನು ಸಂಚರಿಸುತ್ತಾ, ದಕ್ಷಿಣದ ಮಾರ್ಗವಾಗಿ, ಮೈಸಾಸುರನು ನೆಲೆಸಿದ್ದ ಪಟ್ಟಣವಾದ ಮೈಸೂರಿಗೆ ಬರುತ್ತಾರೆ. ಮೈಸೂರಿನಲ್ಲಿ ಮಹಿಷಾಸುರ, ಐಹಿಷಾಸುರ ಎಂಬ ಇಬ್ಬರು ರಾಕ್ಷಸರ ಹಾವಳಿ ಮೈಸೂರಿನಲ್ಲಿ ಹೆಚ್ಚಾಗಿತ್ತು. ಹುಟ್ಟಿದ್ದ ಎಲ್ಲಾ ಮಕ್ಕಳನ್ನು ಈ ರಾಕ್ಷಸರು ತಿನ್ನುತ್ತಿದ್ದಾರೆ. ಇವರನ್ನು ಸಂಹಾರ ಮಾಡಬೇಕೆಂದು ಶಿವನಿಗೆ ಹೇಳುತ್ತಾಳೆ. ಈ ರಾಕ್ಷಸರು ನಾನು ಮತ್ತು ಬ್ರಹ್ಮನಿಂದ ವರವನ್ನು ಪಡೆದುಕೊಂಡಿದ್ದಾರೆ. ಇವರನ್ನು ಕೊಂದರೆ, ನನ್ನ ಹೊಟ್ಟೆಲ್ಲಿರುವ ಮಕ್ಕಳನ್ನು ಕೊಂದಂತಾಗುತ್ತದೆ. ಆದ್ಧರಿಂದ ನಾವು ಇವರನ್ನು ಕೊಲ್ಲುವುದು ತರವಲ್ಲ ಎಂದು ಶಿವ ಹೇಳುತ್ತಾರೆ. 'ಕೊಲ್ಲುವುದಕ್ಕೆ ನಿಮ್ಮಿಂದ ಆಗದಿದ್ದರೆ, ನನಗೆ ವರವನ್ನು ಕೊಡಿ, ನಾನು ಇವರನ್ನು ಕೊಲ್ಲುತ್ತೇನೆ' ಎಂದು ಪಾರ್ವತಿ ಹೇಳುತ್ತಾಳೆ. 'ಪಾರ್ವತಿ ಆಗಬಹುದು' ಎಂದು ಮಹದೇಶ್ವರ ವರವನ್ನು ಕೊಡುತ್ತಾರೆ.

ಮೈಸಾಸುರನ ಸಂಹಾರ ಮಾಡಬೇಕೆಂದು ಪಾರ್ವತಿ ರಾಕ್ಷಸ ಅವತಾರವನ್ನು ತಾಳುತ್ತಾಳೆ. ಮುವತ್ತೆರಡು ಆಯುಧಗಳನ್ನು ಕೈಯಲ್ಲಿ ಇಡಿದುಕೊಂಡು, ಉರಿನಾಲಿಗೆಯನ್ನು ಧರಿಸಿಕೊಂಡು, ರೂಪವನ್ನು ವಿಕಾರ ಮಾಡಿಕೊಂಡು, ಹೆಮ್ಮಾರಿ ವೇಷವನ್ನು ತಾಳುತ್ತಾಳೆ.

ಜನಪದ ಮಹಾಕಾವ್ಯ ಮಲೆಯ ಮಾದೇಶ್ವರ ಮಲೆಯ ಮಾದೇಶ್ವರ ಕಾವ್ಯದ ಹಿಡಿಂಬೆ ಕವಟ್ಲು ಭಾಗದಲ್ಲಿ ಮಾದೇಶ್ವರ ನಾನು ತಂದೆ, ತಾಯಿ ಇಲ್ಲದವನು. ಗುರು ಇಲ್ಲದವನು ಎನ್ನುವಂತಹ ಹೆಸರನ್ನು ಕಳೆಯಬೇಕು. ಭೂಲೋಕದಲ್ಲಿ ನೀನು ಯಾರ ಮಗನೆಂದು ಕೇಳುತ್ತಿದ್ದಾರೆ. ನಾನೇನು ಉತ್ತರವನ್ನು ಕೊಡಲಿ, ನನಗೆ ತಕ್ಕಾದ ತಂದೆ, ತಾಯಿಯನ್ನು ಪಡೆದುಕೊಂಡು ಶ್ರವಣ ದೊರೆಯನ್ನು ಸಂಹಾರ ಮಾಡಬೇಕು ಎಂದು ಸನ್ಯಾಸಿ ವೇಷಧಾರಿಯಾಗಿ ಸುತ್ತೇಳು ಲೋಕವನ್ನು ಪ್ರಯಾಣ ಮಾಡುತ್ತಿರುವಾಗ ಘೋರವಾದ ಅರಣ್ಯ ಮಧ್ಯದಲ್ಲಿ ಹಿಡಿಂಬೆ ಎಂಬ ರಾಕ್ಷಸಿಯನ್ನು ಕಾಣುತ್ತಾರೆ. ಹಿಡಿಂಬೆ ಅನ್ನುವಂತಹ ರಾಕ್ಷಸಿಗೆ ಮಕ್ಕಳ ಸಂತಾನವಿರಲಿಲ್ಲ.

**“ಹಕ್ಕಿ ಪಕ್ಷಿ ಕಾಡು ಮೃಗಗಳ್ಗೆಲ್ಲ ಮಕ್ಳುಂಟು**
**ನನಗೆ ಮಾತ್ರ ಮಕ್ಳಿಲ್ಲವಲ್ಲ**
**ಶಿವುನಲ್ಲಿ ವಂಚುಣೆ ಇದೆಯೋ ಇಲ್ವೋ**
**ನೋಡ್ಬೇಕು ನಾನು ಸಂತಾನವನ್ನು ಪಡೀಬೇಕು”**

ಹೀಗೆ ಹಿಡಿಂಬೆಯು ಯೋಚಿಸಿ, ಶಿವನನ್ನು ಕುರಿತು ತಪಸ್ಸನ್ನು ಮಾಡುತ್ತಾಳೆ. ಆಗ ಮಾದೇಶ್ವರರು ನನ್ನನ್ನು ಕುರಿತು ತಪಸ್ಸು ಮಾಡುತ್ತಿರುವ ಹಿಡಿಂಬೆಯ ಸತ್ಯವನ್ನು ನಾನು ನೋಡಬೇಕು ಎಂದು ಅವಳ ಗರ್ಭಕ್ಕೆ ಬಂದು ಪಿಂಡವಾಗುತ್ತಾರೆ. ಹಿಡಿಂಬೆ ತಪಸ್ಸು ಮಾಡುತ್ತಿರುವಾಗಲೇ ಐದಾರು ತಿಂಗಳು ಕಳೆದಿರುತ್ತದೆ. ನನ್ನ ಹೊಟ್ಟೆಯೊಳಗೆ ಪುತ್ರ ಜನಿಸುತ್ತಾನೋ, ಪುತ್ರಿ ಜನಿಸುತ್ತಾಳೋ ನನಗೆ ಗೊತ್ತಿಲ್ಲ ಎಂದು ಕಾಲಹರಣ ಮಾಡುತ್ತಿರುತ್ತಾಳೆ. ಒಂಬತ್ತು ತಿಂಗಳು ತುಂಬಿ, ಇವಳ ಹೊಟ್ಟೆಯಲ್ಲಿ ಜನಿಸದೆ, ಮಾದೇಶ್ವರನು ತನ್ನ ಮಾಯದಿಂದ ಜನಿಸುತ್ತಾನೆ. ಕೈ ಮೊಳುದ್ದ, ಕಾಲು ಮೊಳುದ್ದ, ಅಂಗೈ ಅಗಲ ಕಿವಿ, ಕೈಕಾಲು ಸಣ್ಣ, ಹೊಟ್ಟೆ ಡುಮ್ಮಣ್ಣ ಹೀಗೆ ವಿಕಾರವಾಗಿ ಮಹದೇಶ್ವರ ಜನಿಸುತ್ತಾರೆ. ಇಂತಹ ವಿಕಾರದ ರೂಪದಲ್ಲಿರುವ ಮಗುವನ್ನು ನಾನು ಸಾಕಿಕೊಂಡಿದ್ದರೆ ನನ್ನ ವಂಶದವರು ಹಾಡಿಕೊಳ್ಳುತ್ತಾರೆ, ನನಗೆ ಈ ಮಗು ಬೇಕಿಲ್ಲ ಎಂದು ಮೆಳೆ ಮೇಲೆ ಎಸೆದು ಹೋಗುತ್ತಾಳೆ. ನಾನು ಉತ್ತಮರಾದಂತಹ ತಂದೆ-ತಾಯಿಯನ್ನು ಪಡೆಯಬೇಕು ಎಂದು ಉತ್ತಮಪುರಕ್ಕೆ ತಮ್ಮ ದೃಷ್ಟಿಯನ್ನು ಮಡುಗುತ್ತಾರೆ.

ಹಿಡಿಂಬೆ ರಾಕ್ಷಸಿಯಾದರೂ ಅವಳು ಒಬ್ಬ ಹೆಣ್ಣು. ತನಗೆ ಸಂತಾನ ಭಾಗ್ಯ ಬೇಕೆಂದು ಶಿವನನ್ನು ಕುರಿತು ತಪಸ್ಸು ಮಾಡಿದಾಗ, ಮಾದೇಶ್ವರನೇ ಇವಳ ಮಗನಾಗಿ ಜನಿಸುವುದು, ಶಿವನು ಕೊಟ್ಟ ವಿಕಾರವಾದ ಮಗುವನ್ನು ಒಪ್ಪದೇ ಅದನ್ನು ಮೆಳೆಯಲ್ಲಿ

ಬಿಸಾಡುವ ಇವಳನ್ನು ಹೆಣ್ಣಿನ ಅಸ್ಮಿತೆಯನ್ನು ಕಾಣಬಹುದು.

**ಪರಾಮರ್ಶನ ಗ್ರಂಥಗಳು:**


1. ಇಂದ್ವಾಡಿ ವೆಂಕಟೇಶ್ (ಸಂ.), (2008), ಮಲೆಯ ಮಾದಪ್ಪನ ಮಹಾಕಾವ್ಯ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
2. ಇಂದ್ವಾಡಿ ವೆಂಕಟೇಶ್ (ಸಂ.), (2010), ಸಿರಿ ಜನಪದ ಮಹಾಕಾವ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
3. ಸುನಂದ ಎಂ. (ಸಂ.), (2011), ನಿಷೇಧಗಳು ಮತ್ತು ಲಿಂಗ ವ್ಯವಸ್ಥೆ, ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು.
4. ಚೆಲುವರಾಜು (ಸಂ.), (1997), ಜುಂಜಪ್ಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
5. ನಾವಡ ಎ.ವಿ., ಸಿರಿ ಪಾಡ್ದನ, (2003), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
6. ಪ್ರಸಾದ್ ಕೇಶವನ್ (ಸಂ.), (1997), ಮಲೆಮಾದೇಶ್ವರ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
7. ಬೋರಲಿಂಗಯ್ಯ ಹಿ.ಚಿ, (1997), ಮಂಟೇಸ್ವಾಮಿ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
8. ರಾಜಶೇಖರ ಪಿ.ಕೆ. (ಸಂ.), (2006), ಜನಪದ ಮಹಾಕಾವ್ಯ ಮಲೆಯ ಮಹದೇಶ್ವರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
9. ಶ್ರೀಮತಿ ಎಚ್.ಎಸ್. (ಸಂ.), (2003), ಸ್ತ್ರೀವಾದ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
10. ಸ್ವಾಮಿ ಬಿ.ಎಸ್., (1993), ಮಲೆಯ ಮಹದೇಶ್ವರ ಒಂದು ಅಧ್ಯಯನ, ನವೀನ ಪ್ರಕಾಶನ, ಬೆಂಗಳೂರು.
11. ಸ್ವಾಮಿ ಬಿ.ಎಸ್. (ಸಂ.), (2001), ಜಾನಪದ ಮಹಾಕಾವ್ಯ ಮಲೆಯ ಮಾದೇಶ್ವರ, ದಾಮಿನಿ ಸಾಹಿತ್ಯ ಪ್ರಕಾಶನ, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.